ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಎ.ಸಿ.ಜೆ.ಎಮ್.ನ್ಯಾಯಾಲಯ, ಉಡುಪಿ.

ಸಿ.ಸಿ. ನಂ. 851/2025

ಪಡುಬಿದ್ರಿ ಪೊಲೀಸ್ ಠಾಣೆ ..... ಪಿರ್ಯಾದಿದಾರರು

ಮತ್ತು

ಬಾಬು ಕೆ ಯಾನೆ ಭಾಸ್ಕರ ಯಾನೆ ಭಾಸ್ಕರ ಪೂಜಾರಿ
ಪ್ರಾಯಃ 59 ವರ್ಷ,
ವಾಸಃ ದಿಃ ಮಂಜು ಪೂಜಾರಿ
ಮನೆ ನಂಬ್ರ 10-30-ಬಿ ಸಂಪಿಗೆ ನಗರ,
ಉದ್ಯಾವರ ಗ್ರಾಮ, ಕಾಪು ತಾಲೂಕು ...... ಆರೋಪಿ

<u>ಆಪಾದನೆ</u>

ಶ್ರೀ ಪಿ.ಆರ್ ಯೋಗೇಶ ಬಿ.ಕಾಂ. ಎಲ್.ಎಲ್.ಬಿ., ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಎಸಿಜೆಎಂ, ಆದ ನಾನು ಮೇಲ್ಕಾಣಿಸಿದ ಆರೋಪಿತರಾದ ನಿಮ್ಮ ಮೇಲೆ ಹೊರಿಸುವ ಆಪಾದನೆ ಏನೆಂದರೆಃ

ದಿನಾಂಕ 01-02-2025 ರಂದು ಮದ್ಯಾಹ್ನ 2.30 ರ ಸಮಯದಲ್ಲಿ ಆರೋಪಿಯವರಾದ ನೀವು ಕೆಎ 20-ಎಎ-5803 ನಂಬ್ರದ ಅಟೋ ರಿಕ್ಷಾದಲ್ಲಿ ಚಾಸಾ 1 ಮತ್ತು 2 ನೇಯವರನ್ನು ಅಜ್ಜರಕಾಡು ಆಸ್ಪತ್ರೆಯ ಬಳಿಯ ರಿಕ್ಷಾ ನಿಲ್ದಾಣದಿಂದ ಕುಳ್ಳಿರಿಸಿಕೊಂಡು ಉಡುಪಿ ಕಡೆಯಿಂದ ಮಂಗಳೂರು ಕಡೆಗೆ ಮಾನವ ಜೀವಕ್ಕೆ ಹಾನಿ ಆಗುವ ರೀತಿಯಲ್ಲಿ ಅತೀ ವೇಗ ಮತ್ತು ನಿರ್ಲಕ್ಷತೆಯಿಂದ ಚಾಲನೆ ಮಾಡಿರುವ ಮೂಲಕ ಕಲಂ 281 ರ ಬಿ.ಎನ್.ಎಸ್. ರೀತಿಯ ಶಿಕ್ಷಾರ್ಹ ಅಪರಾಧವನ್ನು ಎಸಗಿರುತ್ತೀರಿ ಎಂದು ಆಪಾದನೆ ಇರುತ್ತದೆ.

ಅದೇ ದಿನ, ಅದೇ ಸಮಯ, ಅದೇ ಸ್ಥಳ, ಹಾಗೂ ಸಂದರ್ಭದಲ್ಲಿ ಆರೋಪಿಯವರಾದ ನೀವು ಡಿವೈಡರಿಗೆ ಡಿಕ್ಕಿ ಪಡಿಸಿದ ಪರಿಣಾಮ ಚಾಸಾ 2 ರವರಿಗೆ ತೀವ್ರ ಸ್ವರೂಪದ ಗಾಯವನ್ನು ಮಾಡಿರುವ ಮ್ರೂಲಕ ಭಾರತೀಯ ನ್ಯಾಯ ಸಂಹಿತೆಯ ಕಲಂ 125(ಬಿ)ರ ರೀತಿಯ ಶಿಕ್ಷಾರ್ಹ ಅಪರಾಧವನ್ನು ಎಸಗಿರುತ್ತೀರಿ ಎಂದು ಆಪಾದನೆ ಇರುತ್ತದೆ.

ದಿಃ 01-02-2025 ರಂದು ನಿಮ್ಮ ತಪ್ಪಿ ನಿಂದ ಮೇಲೆ ಹೇಳಿದಂತೆ ಆಗಿದ್ದ ಅಪಘಾತದಲ್ಲಿ ಗಾಯಗೊಂಡಿದ್ದ ಸುದೀರ್ ರವರು ದಿಃ 26-04-2025 ರಂದು ರಾತ್ರಿ 12.30 ರ ಸಮಯದಲ್ಲಿ ಚಾಸಾ 1 ರವರು ಎಬ್ಬಿಸಲು ಹೋದಾಗ ಸ್ಪಂದಿಸದೇ ಇದ್ದ ಕಾರಣ ಅವರನ್ನು ಉಡುಪಿಯ ಜಿಲ್ಲಾ ಆಸ್ಪತ್ರೆಗೆ ಕರೆದುಕೊಂಡು ಬಂದಾಗ ರಾತ್ರಿ 2.12 ರ ಸಮಯದಲ್ಲಿ ವೈದ್ಯರು ಪರೀಕ್ಷಿಸಿ ಅವರು ಮೃತ

ಪಟ್ಟೆದ್ದಾರೆಂದು ಖಾತರಿ ಪಡಿಸಿದ್ದು ಅವರ ಸಾವಿಗೆ ನೀವು ಮಾಡಿದ ಅಪಘಾತವೇ ಕಾರಣರಾಗಿದ್ದರಿಂದ ನೀವು ಭಾರತೀಯ ನ್ಯಾಯ ಸಂಹಿತೆಯ ಕಲಂ 106 ರ ರೀತಿಯ ಶಿಕ್ಷಾರ್ಹ ಅಪರಾಧವನ್ನು ಎಸಗಿರುತ್ತೀರಿ ಎಂದು ಆಪಾದನೆ ಇರುತ್ತದೆ.

ಅದೇ ದಿನ ಅದೇ ಸಮಯ ಅದೇ ಸ್ಥಳದಲ್ಲಿ ಹಾಗೂ ಸಂದರ್ಭದಲ್ಲಿ ಆರೋಪಿಯವರಾದ ನೀವು ಮಾಲೀಕತ್ವ ಹೊಂದಿರುವ ಕೆಎ 20-ಎಎ-5803 ನಂಬ್ರದ ಅಟೋ ರಿಕ್ಷಾಕ್ಕೆ ಕಾಪು ತಾಲೂಕಿನ ತೆಂಕ ಎರ್ಮಾಳು ಗ್ರಾಮದ ಎರ್ಮಾಳು ಎಂಬಲ್ಲಿ ಚಲಾಯಿಲು ಪರವಾನಿಗೆಯನ್ನು ಹೊಂದಿರುವುದಿಲ್ಲ. ಈ ಮೂಲಕ ನೀವು 192(ಎ) IMV ಆ್ಯಕ್ಟ್ ನಂತೆ ಶಿಕ್ಷಾರ್ಹ ಅಪರಾಧವನ್ನು ಎಸಗಿರುತ್ತೀರಿ ಎಂದು ಆಪಾದನೆ ಇರುತ್ತದೆ.

ಪ್ರಶ್ನೆ 1ಃ ಈಗ ನಿಮಗೆ ಓದಿ ವಿವರಿಸಿದ ಆಪಾದನೆಯು ತಿಳಿಯಿತೇ?
ಉತ್ತರಃ

ಪ್ರಶ್ನೆ 2 ಃ ಆಪಾದನೆಯನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆ ಆಗಬೇಕೇ?

ಉತ್ತರ ಃ

ಮೇಲಿನ ಆಪಾದನೆಯನ್ನು ಆರೋಪಿಯವರಿಗೆ ಅವರಿಗೆ ತಿಳಿಯುವ ಭಾಷೆಯಲ್ಲಿ ಓದಿ ವಿವರಿಸಿ ಹೇಳಿದ್ದು ಅವರು ನೀಡಿದ ಉತ್ತರವನ್ನು ಯಥಾವತ್ತಾಗಿ ದಾಖಲಿಸಲಾಗಿದೆ.

ದಿನಾಂಕ 11 ನೇ ದಿನ ಮಾರ್ಚ್ ತಿಂಗಳು, 2026.

(ಪಿ. ಆರ್ ಯೋಗೇಶ )
ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಎಸಿಜೆಎಂ, ಉಡುಪಿ.